ಶ್ರೀ ಎಸ್. ಕರಿಯಪ್ಪ.—ಉತ್ತರದಲ್ಲಿ ಒಂಬತ್ತು ರಸ್ತೆಗಳನ್ನು ಮಾಡುವುದಾಗಿ ಹೇಳಿದೆ. ಅದರಂತೆ ಬೇರೆ ರಸ್ತೆಗಳನ್ನು ಮಾಡುವ ಪ್ರಪೋಸಲ್ ಇದೆಯೆ?

ಶ್ರೀ ಟಿ. ಚನ್ನಯ್ಯ.—ಇನ್ನೂ ನಾಲ್ಕು ಮಾಡಬೇಕೆಂದು ಹಣ ಒದಗಿಸಿದೆ.

ಶ್ರೀ ಎಸ್. ಕರಿಯಪ್ಪ.—ಹಿಂದೆ ಮಂಜೂರು ಮಾಡಿದೆಯೆಂದು ಹೇಳಿದ್ದ ಕೆಲವು ರಸ್ತೆಗಳನ್ನು ಮುಂದುವರಿಸಲು ಎಸ್ಟಿಮೇಟ್ ವಗೈರೆ ಬಂದಿಲ್ಲವೆ?

ಶ್ರೀ ಟಿ. ಚನ್ನಯ್ಯ.—ತಿಳಿದು ಹೇಳುತ್ತೇನೆ.

ಶ್ರೀ ಎಸ್. ಕರಿಯಪ್ಪ.—ಈಗ ವಿಚಾರಿಸಿ ಆ ರಸ್ತೆಗಳನ್ನು ಮುಂದುವರಿಸಲು ಪ್ರಯತ್ನಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಸಾಧ್ಯವಾದರೆ ಮಾಡೋಣ.

---

## Kadur-Maravanji Road.

*Q.*—583. **Sri Y. M. CHANDRASEKHARIAH** (Kadur).—

Will the Government be pleased to state:—

(*a*) the year in which the work of Kadur-Maravanji Road of Kadur Taluk was commenced;

(*b*) the amount expended on this road till now (information to be given yearwar);

(*c*) the number of years and the amount required to complete the work and make it a pucca road;

(*d*) the length of this road?

*A.*—**Sri T. CHANNIAH** (Minister for Public Health and Local Self-Government).—

(*a*) 1941-42.

(*b*) Rs. 92,416-9-0

| | | | Rs. | a. | p. |
|---|---|---|---|---|---|
| June | 1942 | ... | 5,867 | 14 | 0 |
| ,, | 1943 | ... | 2,192 | 8 | 0 |
| ,, | 1944 | ... | 768 | 15 | 0 |
| ,, | 1945 | ... | 188 | 2 | 0 |
| ,, | 1946 | ... | 1,358 | 9 | 0 |
| ,, | 1947 | ... | 2,151 | 8 | 0 |
| ,, | 1948 | ... | 6,588 | 12 | 0 |
| ,, | 1949 | ... | 11,405 | 12 | 0 |
| ,, | 1950 | ... | 17,471 | 8 | 0 |
| March | 1951 | ... | 11,173 | 6 | 0 |
| ,, | 1952 | ... | 3,118 | 1 | 0 |
| ,, | 1953 | ... | 4,530 | 13 | 0 |
| ,, | 1954 | ... | 13,266 | 0 | 6 |
| ,, | 1955 | ... | 5,877 | 12 | 0 |
| January | 1956 | ... | 1,400 | 10 | 0 |
| Petty Works | | ... | 1,363 | 5 | 0 |
| Establishment, Tools and Plant Charges. | | | 3,693 | 1 | 6 |
| | Total | ... | 92,416 | 9 | 0 |

(*c*) It may take about 2 years. An estimate for Rs. 1·3 lakhs is under scrutiny.

(*d*) 22½ miles.

ಶ್ರೀ ವೈ. ಎಂ. ಚಂದ್ರಶೇಖರಯ್ಯ (ಕಡೂರು).—ಮರವಂಜಿ ರಸ್ತೆ 1941-42ನೆಯ ಸಾಲಿನಲ್ಲಿ ಪ್ರಾರಂಭವಾಗಿ ಈ ದಿವಸದವರೆಗೂ ಪೂರ್ಣವಾಗದಿರುವುದಕ್ಕೆ ಕಾರಣವೇನು?

ಶ್ರೀ ಟಿ. ಚನ್ನಯ್ಯ.—ಈಗಾಗಲೆ 92,416-9-0 ರೂಪಾಯಿಗಳನ್ನು ಖರ್ಚು ಮಾಡಲಾಗಿದೆ. ಇನ್ನೂ ಒಂದು ಲಕ್ಷ ಮೂರು ಸಾವಿರ ರೂಪಾಯಿಗಳಿಗೆ ಅಂದಾಜು ತಯಾರಾಗಿ ಸ್ಕ್ರುಟಿನಿಗೆ ಹೋಗಿದೆ. ಈ ಹಣ ಮಂಜೂರು ಮಾಡಿದ ತಕ್ಷಣ ಬಾಕಿಯಿರುವ ರಸ್ತೆ ಪೂರ್ಣ ಮಾಡಲು ಸರ್ಕಾರ ಕ್ರಮ ಕೈಕೊಳ್ಳುತ್ತದೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಪ್ರಾರಂಭವಾಗಿ 15 ವರ್ಷಗಳಾಗಿದ್ದರೂ ಇಲ್ಲಿನವರೆಗೂ ಆ ರಸ್ತೆಯನ್ನು ಪೂರ್ಣಮಾಡದಿರುವುದು ಸರಿಯಲ್ಲವೆಂಬುದು ಸರ್ಕಾರದ ಗಮನಕ್ಕೆ ಬಂದಿದೆಯೆ?

ಶ್ರೀ ಟಿ. ಚನ್ನಯ್ಯ.—ಬಹಳ ವರ್ಷವಾಗಿದೆಯೆಂಬುದು ಗಮನಕ್ಕೆ ಬಂದಿದೆ. ಏಕೆ ನಿಧಾನವಾಗಿದೆಯೆಂಬುದನ್ನು ಸಂಬಂಧಪಟ್ಟ ಅಧಿಕಾರಿಗಳಲ್ಲಿ ವಿಚಾರ ಮಾಡುತ್ತಿದ್ದೇವೆ. ಸಕಾರಣ ತಿಳಿದನಂತರ ಸ್ಪೆಷಲ್ಲಾಗಿ ತಿಳಿವಳಿಕೆ ಕೊಟ್ಟು ಜಾಗ್ರತೆ ಕೆಲಸ ಮಾಡಲು ಏರ್ಪಾಡು ಮಾಡುತ್ತೇವೆ.

ಶ್ರೀ ವೈ. ಎಂ. ಚಂದ್ರಶೇಖರಯ್ಯ.—ಈಗ ಈ ಕೆಲಸವನ್ನು ಮಂಜೂರು ಮಾಡಿ ಜಾಗ್ರತೆ ಮಾಡಿಸುತ್ತೀರಾ?

ಶ್ರೀ ಟಿ. ಚನ್ನಯ್ಯ.—ಪ್ರಯತ್ನ ಮಾಡುತ್ತೇವೆ.

ಶ್ರೀ ಬಿ. ಹುಚ್ಚೇಗೌಡ.—92 ಸಾವಿರ ಚಿಲ್ಲರೆ ರೂಪಾಯಿಗಳನ್ನು ಪಬ್ಲಿಕ್ ವರ್ಕ್ಸ್ ಇಲಾಖೆಯವರು ಖರ್ಚುಮಾಡಿರುವರೆ ಅಥವಾ ಡಿಸ್ಟ್ರಿಕ್ಟ್ ಬೋರ್ಡಿನವರು ಖರ್ಚು ಮಾಡಿರುವರೆ?

ಶ್ರೀ ಟಿ. ಚನ್ನಯ್ಯ.—ಪಬ್ಲಿಕ್ ವರ್ಕ್ಸ್ ಇಲಾಖೆಯವರು ಖರ್ಚು ಮಾಡಿದ್ದಾರೆ.

ಶ್ರೀ ಬಿ. ಹುಚ್ಚೇಗೌಡ.—ಈ 92 ಸಾವಿರ ಚಿಲ್ಲರೆಯಲ್ಲಿ ಒಂಭತ್ತು ಸಾವಿರ ರೂಪಾಯಿ ಕೆಲಸ ಕೂಡ ಆಗಿಲ್ಲವೆಂಬುದನ್ನು ವಿಚಾರ ಮಾಡುತ್ತೀರಾ?

ಶ್ರೀ ಟಿ. ಚನ್ನಯ್ಯ.—ಖರ್ಚಾಗಿರುವುದಕ್ಕೇ ಕೊಟ್ಟಿರುವುದು. ತಾವು ಹೇಳಿದಂತೆ ಆಗಿಲ್ಲ.

---

## District Board Roads, Chickmagalur District (Acquisition and compensation).

*Q.*—584. **Sri Y. M. CHANDRASEKHARIAH** (Kadur).—

Will the Government be pleased to state:—

(*a*) the length of District Board Roads at present in Chickmagalur District (information to be given talukwar);

(*b*) the District Board Roads in respect of which acquisition of lands has been completed in the district (information to be given talukwar);